# <u>ಎಂಥಾ ಸಣ್ಣವನೆ ನಿನ್ನ ಮಗ</u>

1. **Ref.:** Shri Purandara Dasara Sahitya Part – 4, Krishna Leele, edited by Shri Betageri Krishna Sharma and Shri Bengeri Huchhu Rayaru, page No. 75
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 98
3. **Note:** Lyrics mentioned without highlights are as per Ref. 2 and the lyrics given in yellow highlights are as per Ref. 1.
4. **Note:** Singer has followed lyrics as in Ref. 2.

| | |
|---|---|
| ರಾಗ: ನಾಟಕುರಂಜಿ. ತಾಳ: ಅಟ | ರಾಗ: ಯದುಕುಲಕಾಂಬೋದಿ ತಾಳ: ಅಟ |
| ಎಂಥಾ ಸಣ್ಣವನೆ, ನಿನ್ನ ಮಗ-<br>ನೆಂಥಾ ಸಣ್ಣವನೆ ‖ ಪ ‖ | ಎಂತಹ ಸಣ್ಣವನೆ-ನಿನ್ನ ಮಗನಂತಹರೆಲ್ಲಿಲ್ಲವೆ<br>ಹೊಂತಕಾರಿ ಬಲವಂತರಿಗಧಿಕನು |
| ಎಂಥ ಸಣ್ಣವನಿವನಂಥವರಿಲ್ಲವು<br>ಹೊಂತಕಾರಿ ಬಲವಂತರಿಗಧಿಕನು ‖ ಅಪ ‖ | |
| ತರಳರಂತಿಪ್ಪನು ತರುಣಿಯರೊಳಾಡುವ<br>ಕಿರಿಬೆರಳುಗುರಿನಲಿ ಗಿರಿಯನೆತ್ತಿದವ ‖ 1 ‖ | ತರಳನಂತಿಪ್ಪನು ತರಳೆಯರೊಡನಾಡುವ<br>ಕಿರು ಬೆರಳುಗುರಲಿ ಗಿರಿಯನೆತ್ತಿದವ |
| ಕಾಳಿಂಗ ಸರ್ಪನ ಕಾಲಿಲಿ ತುಳಿದವ<br>ಪಲಾಯನವ ಮಾಡಿ ಕಾಲಯವನ ಸುಟ್ಟ ‖ 2 ‖ | ಕಾಳಿಯ ಸರ್ಪನ ಕಾಲಲ್ಲಿ ತುಳಿದವ<br>ಪಲಾಯನ ಮಾಡಿ ಕಾಲಯವನನ ಸುಟ್ಟ |
| ನಿಚ್ಚ ಪಾವನ ಮಾಡಿ ಆಶ್ಚರ್ಯ ತೋರಿದ ಯೆಂ-<br>ದಚ್ಚು ಮಾಡುವಿರೆಂದು ಮುಚ್ಚಿಕೊಂಬೆಲ್ಲ ನೀ ‖ 3 ‖ | ಕಿಚ್ಚು ಪಾನವ ಮಾಡಿ ಅಚ್ಚರಿ ತೋರಿದ<br>ರಚ್ಚೆ ಮಾಡುವಿರೆಂದು ಮುಚ್ಚಿಕೊಂಬುವಿಯಲ್ಲೆ |
| ಬಾಯಿ ತೆರೆದನಲ್ಲೆ ನೀನಂಜುವಂದದಿ<br>ಆ ಯಮಳಾರ್ಜುನರಾಯನ ಬಿಡಿಸಿದ ‖ 4 ‖ | ಬಾಯಿ ತೆರೆದನಲ್ಲೆ ನೀನಂಜುವಂದದಿ<br>ಆಯಮಳಾರ್ಜುನರಾಯಾಸ ಬಿಡಿಸಿದ |
| ದಿಟ್ಟತನದಿ ಮೊಲೆ ಕೊಟ್ಟವಳನು ಕೊಂದ<br>ಕೃಷ್ಣ ಪುರಂದರ ವಿಠಲ ರಾಯನು ‖ 5 ‖ | ದಿಟ್ಟತನದಿ ಮೊಲೆಗೊಟ್ಟವಳನು ಕೊಂದ<br>ಪುಟ್ಟ ಪುರಂದರ ವಿಠಲ ರಾಯನು |

**Classification:** Keerthane

**Ankita:** purandara vittala

**Location:** NA

**Category:** Krishna Leele

**Sub-Category:** Krishna, maga, gopi, parvata, kalinga, asura, bayi, putani, uraga, muchukunda,

**Pravachana:** NA

**Explanation:** NA